ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ,
ಜಿಲ್ಲಾಡಳಿತ ಭವನ, ರೂಮ್ ನಂ.ಜಿ.ಎ.11, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ-562101

ಇ-ಮೇಲ್:ayushcbpur@gmail.com ದೂರವಾಣಿ ನಂ-08156-277141

ಸಂಖ್ಯೆ:ಜಿ.ಆ.ಕ.ಚಿ/23/ಸಿ.ಹೆಚ್.ಓ/2026-27 ದಿನಾಂಕ:31-07-2026

# ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲಾ ಆಯುಷ್ ಕಛೇರಿ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಅಭಿವೃದ್ಧಿಪಡಿಸಲಾದ ಆಯುಷ್ ಆರೋಗ್ಯ ಮಂದಿರ, ಸೋಮೇನಹಳ್ಳಿ, ಗುಡಿಬಂಡೆ ತಾ॥ ಇಲ್ಲಿಗೆ ಸಮುದಾಯ ಆರೋಗ್ಯ ಅಧಿಕಾರಿ/ Community Health officer (CHO) ಹುದ್ದೆಯನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ ಸಂ | CHO ಹುದ್ದೆ ಖಾಲಿ ಇರುವ ಆಯುಷ್ ಆರೋಗ್ಯ ಮಂದಿರದ ಹೆಸರು | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿರುವ ಮೀಸಲಾತಿ (ಲಂಬ) | ಸಮತಳ ಮೀಸಲಾತಿ | ಮಾಹೆಯಾನ ಸಂಚಿತ ವೇತನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|
| 1 | ಆಯುಷ್ ಆರೋಗ್ಯ ಮಂದಿರ, ಸೋಮೇನಹಳ್ಳಿ, ಗುಡಿಬಂಡೆ ತಾ॥ | ಸಮುದಾಯ ಆರೋಗ್ಯ ಅಧಿಕಾರಿ Community Health Officer (CHO) | 01 | ಸಾಮಾನ್ಯ | ಸಾಮಾನ್ಯ ಅಭ್ಯರ್ಥಿ | ರೂ.25,000/ + 15,000 (PLP) | BAMS |

## ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

1. ಗುತ್ತಿಗೆ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ದಿನಾಂಕ:31-03-2027 ಕ್ಕೆ ಅಂತ್ಯಗೊಳ್ಳುತ್ತದೆ. ಆರ್ಥಿಕ ವರ್ಷ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ (Break) ನೀಡಿ ತರುವಾಯ ಮುಂದಿನ ಆರ್ಥಿಕ ವರ್ಷದ ಕೊನೆಯ ದಿನಾಂಕದವರೆಗೆ ಗುತ್ತಿಗೆ ಸೇವೆಯನ್ನು ಮುಂದುವರೆಸುವ ಬಗ್ಗೆ ಆಯುಷ್ ನಿರ್ದೇಶನಾಲಯ ಹಾಗೂ ಜಿಲ್ಲಾ ಆಯುಷ್ ಸಮಿತಿಯು ನಿರ್ಣಯಿಸಿದಂತೆ ಕ್ರಮಕ್ಕೈಗೊಳ್ಳಲಾಗುವುದು.
2. ವಯೋಮಿತಿಯು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರತಕ್ಕದ್ದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 262 ಸೇನೆನಿ 2025, ದಿನಾಂಕ:29-01-2026 ರಲ್ಲಿ ಜಾರಿ ಮಾಡಿರುವ ಆದೇಶದಲ್ಲಿ ಎಲ್ಲಾ ಪ್ರವರ್ಗಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ವಯೋಮಿತಿಯಲ್ಲಿ 05 ವರ್ಷಗಳ ಸಡಿಲಿಕೆಯನ್ನು ನೀಡಲಾಗಿದೆ. ಅದನ್ನು ಅಳವಡಿಸಿಕೊಂಡ ನಂತರ ಅಭ್ಯರ್ಥಿಗಳು ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| | |
|---|---|
| ಸಾಮಾನ್ಯ ಅಭ್ಯರ್ಥಿಗಳಿಗೆ | ಗರಿಷ್ಠ 40 ವರ್ಷಗಳು |
| ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ | ಗರಿಷ್ಠ 43 ವರ್ಷಗಳು |
| ಪ.ಜಾ, ಪ.ಪಂ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳಿಗೆ | ಗರಿಷ್ಠ 45 ವರ್ಷಗಳು |

ಅಂಗವಿಕಲ ಅಭ್ಯರ್ಥಿ ಅಥವಾ ವಿಧವೆಯಾಗಿದ್ದಲ್ಲಿ 10 ವರ್ಷಗಳು ವಯೋಮಿತಿ ಸಡಿಲಿಕೆ. (ನಿಯಮಗಳು ಅನ್ವಯ)

3. ಜಿಲ್ಲಾ ಆಯುಷ್ ಸಮಿತಿಯ ಸಂದರ್ಶನಕ್ಕೆ ಹಾಜರಾಗುವ ಮುನ್ನ ವಿದ್ಯಾರ್ಹತೆ /ವಯಸ್ಸು/ವಾಸಸ್ಥಳ ಮತ್ತು ಸಮಿತಿಯು ಕೋರಿರುವ ಇತರೆ ಮೂಲ ದಾಖಲೆಗಳನ್ನು ಹಾಜರುಪಡಿಸುವುದು.
4. ಕೇಂದ್ರ ಸ್ಥಾನದಲ್ಲಿ ತಂಗಿದ್ದು 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು, ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು.
5. ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಸಂಚಿತ ಮೊತ್ತವನ್ನು ಮಾತ್ರ ನೀಡಲಾಗುವುದು.
6. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಅಥವಾ ಸರ್ಕಾರ, ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಪರ್ಯವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.

7. ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು ಗೈರು ಹಾಜರಾದಲ್ಲಿ ಅವರನ್ನು ನೇಮಕಾತಿಗೆ ತಿರಸ್ಕರಿಸಲಾಗುವುದು. ಯಾವುದೇ ಕಾರಣಕ್ಕೂ ಇನ್ನೊಂದು ಅವಕಾಶವನ್ನು ಕೊಡಲಾಗುವುದಿಲ್ಲ.

8. Community Health officer (CHO) ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನೇಮಕಗೊಂಡ ನಂತರ ನೀಡಲಾಗುವುದು.

9. ಅಭ್ಯರ್ಥಿಗಳು ದುರ್ನಡತೆಯಿಂದಾಗಿ ಸಕಾರಕ್ಕೆ ಆರ್ಥಿಕ & ಇನ್ನಿತರ ನಷ್ಟ ಉಂಟಾದಲ್ಲಿ ಅದನ್ನು ಅವರುಗಳೇ ಸರ್ಕಾರಕ್ಕೆ ತುಂಬಿ ಕೊಡುವುದು.

10. ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ.

11. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಇತರೆ ಆಸ್ಪತ್ರೆಗಾಗಲೀ/ಚಿಕಿತ್ಸಾಲಯಕ್ಕಾಗಲೀ ಅಥವಾ ಬೇರೆ ಜಿಲ್ಲೆಗೆ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಅವಕಾಶವಿರುವುದಿಲ್ಲ.

12. ಅಪೂರ್ಣ ಅರ್ಜಿಗಳು ಹಾಗು ಅವಧಿ ಮೀರಿ ಬರುವ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು. ಅರ್ಜಿದಾರರ ವಾಸಸ್ಥಳದ ಬಗ್ಗೆ ಸಂಬಂಧಿಸಿದ ನಗರಪಾಲಿಕೆ/ತಹಶೀಲ್ದಾರರಿಂದ ಪಡೆದ ದೃಡೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

13. ತಾತ್ಕಾಲಿಕ ನೇರ ಗುತ್ತಿಗೆ ಹುದ್ದೆಗಳು ಆಯುಷ್ ನಿರ್ದೇಶನಾಲಯವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಒಳಪಟ್ಟಿರುತ್ತದೆ.

14. ಮೇಲೆ ತಿಳಿಸಿರುವ ಹುದ್ದೆಯನ್ನು ಮೆರಿಟ್, ಅನುಭವ ಹಾಗೂ ಸಂದರ್ಶನದ (ಕ್ರಮವಾಗಿ 70%, 20%, 10%) ಆಧಾರದ ಮೇಲೆ ನೇಮಕ ಮಡಿಕೊಳ್ಳಲಾಗುವುದು.

15. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಖಾಯಂ ಅಭ್ಯರ್ಥಿಗಳು ನೇಮಕಾತಿಯಾದಲ್ಲಿ ಗುತ್ತಿಗೆ ಅವಧಿ ಮುಗಿಯುವ ಮುನ್ನವೇ ಅಭ್ಯರ್ಥಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

16. ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆಯಲ್ಲಿ ವಿಧಿಸಿದ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳನ್ನು ಬೇಷರತ್ತಾಗಿ ಒಪ್ಪಿ ಅರ್ಜಿ ಸಲ್ಲಿಸತಕ್ಕದ್ದು.

17. ಸರ್ಕಾರ, ಮಾನ್ಯ ಆಯುಕ್ತರು ಅಥವಾ ಮಾನ್ಯ ಜಿಲ್ಲಾಧಿಕಾರಿಗಳು ಸೂಚನೆ ನೀಡಿದಲ್ಲಿ ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಯನ್ನು ರದ್ದುಗೊಳಿಸಬಹುದು ಅಥವಾ ನೇಮಕಾತಿಯನ್ನು ತಡೆ ಹಿಡಿಯಬಹುದು ಇದಕ್ಕೆ ಒಪ್ಪಿ ಅರ್ಜಿ ಸಲ್ಲಿಸತಕ್ಕದ್ದು.

18. ಸಮುದಾಯ ಆರೋಗ್ಯ ಅಧಿಕಾರಿ/ Community Health officer (CHO) ಹುದ್ದೆಗೆ ಪದವಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಲಾಗುವುದು.

19. ಅಭ್ಯರ್ಥಿಯು ಅರ್ಜಿಯೊಂದಿಗೆ ವಿದ್ಯಾರ್ಹತೆ/ವಯಸ್ಸು/ವಾಸಸ್ಥಳದ ಪ್ರತಿಗಳನ್ನು ಹಾಗೂ ಎರಡು ಪಾಸ್ ಪೋರ್ಟ್ ಸೈಜಿನ ಫೋಟೋಗಳನ್ನು ಲಗತ್ತಿಸುವುದು.

20. ಭರ್ತಿ ಮಾಡಿದ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.

21. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:01-08-2026 ಮತ್ತು ಕೊನೆಯ ದಿ:31-08-2026

22. ಅರ್ಜಿಗಳನ್ನು ಎನ್.ಐ.ಸಿ ವೆಬ್‌ಸೈಟ್ https://chikkaballapur.nic.in ನಲ್ಲಿ ಡೌನ್ ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಚಿಕ್ಕಬಳ್ಳಾಪುರ-562101 ಇಲ್ಲಿಗೆ ಕಛೇರಿ ಅವಧಿಯಲ್ಲಿ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು, ಕೊನೆಯ ದಿನಾಂಕದ ನಂತರ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಒಂದು ವೇಳೆ ಕೊನೆಯ ದಿನಾಂಕದಂದು ಸರ್ಕಾರಿ ರಜೆಯಂದು ಘೋಷಿಸಲ್ಪಟ್ಟಲ್ಲಿ ಮರುದಿನವನ್ನು ಅಂತಿಮ ದಿನಾಂಕವೆಂದು ಪರಿಗಣಿಸಲಾಗುತ್ತದೆ.

## Main Duties of Community Health Officer (CHO)

1. Attend daily OPD in HWC and in the community as per the schedule
2. Overall planning and monitoring of community level activities including yoga and Herbal garden.
3. Participate / organize meetings.
4. The CHO as a team Leader and in-charge of HWC will broadly be expected to carry out Public health functions, ambulatory care and management.
5. Ensure that all households in the service areas are listed empanelled a database is Maintained in digital format / paper format as required by state.
6. Prakriti analysis of every population in the catchment area above 18 years of age.
7. Any other work assigned by DAO.

ಸಹಿ/-
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆಯುಷ್ ಸಮಿತಿ ಮತ್ತು
ಜಿಲ್ಲಾ ಆಯುಷ್ ಅಧಿಕಾರಿಗಳು,
ಚಿಕ್ಕಬಳ್ಳಾಪುರ.

ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಆಯುಷ್ ಕಛೇರಿ
ಚಿಕ್ಕಬಳ್ಳಾಪುರ - 562 101.